ದಿಃ 28.10.2015 OS.No. 76/2011 PW-2

28.10.2015 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

*ಪಾಟೀ ಸವಾಲು ಃ ಶ್ರೀ. ಕೆ.ಟಿ.ಟಿ ವಕೀಲರಿಂದಃ*

ವಾದಿ ಕಾಡಮ್ಮ ನನ್ನ ಸೋದರ ಮಾವನ ಹೆಂಡತಿ ಇರುತ್ತಾರೆ. ನನ್ನ ತಂದೆಯ ಹೆಸರು ಸಿದ್ದೇಗೌಡ ಇರುತ್ತದೆ. ನನ್ನ ತಂದೆ ಹೆಸರು ಎಸ್. ಸಿದ್ದೇಗೌಡ ಅಣ್ಣೂರು ಇರುತ್ತದೆ. ಅವರು ಸಹಿ ಮಾಡುವಾಗ ಎಸ್.ಸಿದ್ದೇಗೌಡ ಎಂದು ಸಹಿ ಮಾಡುತ್ತಿದ್ದರು. ನನ್ನ ತಂದೆಯ ಸೋದರ ಮಾವಂದಿರು ಮಾಡಿಕೊಂಡ ವಿಭಾಗದಲ್ಲಿ ನನ್ನ ತಂದೆ ಸಹ ಭಾಗವಹಿಸಿದ್ದರು. ಸದರಿ ವಿಭಾಗದ ಬಗ್ಗೆ ನನಗೆ ಗೊತ್ತು. ೧ನೇ ವಾದಿ ಗಂಡ ಎಳವೇಗೌಡ ತಂದೆಯ ಹೆಸರು ಅಂಕೇಗೌಡ ಇರುತ್ತದೆ. ಸದರಿ ಅಂಕೇಗೌಡರು ಇಬ್ಬರು ಅಣ್ಣ ತಮ್ಮಂದಿರು ಇದ್ದು, ಅವರ ತಮ್ಮನ ಹೆಸರು ಚೆನ್ನೇಗೌಡ ಇರುತ್ತದೆ. ಅಂಕೇಗೌಡ ಹಾಗೂ ಚನ್ನೇಗೌಡರ ನಡುವೆ ಆದ ವಿಭಾಗದಲ್ಲಿ

ಅಂಕೇಗೌಡರಿಗೆ ೩ ಎಕರೆ ೪ ಗುಂಟೆ ಜಮೀನು ಹೋಗಿತ್ತು. ಆ ರೀತಿ ಜಮೀನು ಹೋದ ಬಗ್ಗೆ ನನಗೆ ಖುದ್ದು ಮಾಹಿತಿ ಇರುತ್ತದೆ. ಸದರಿ ಅಂಕೇಗೌಡ ಹಾಗೂ ಚೆನ್ನೇಗೌಡರ ನಡುವೆ ಆದ ವಿಭಾಗದ ಬಗ್ಗೆ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಅಂಕೇಗೌಡರಿಗೆ ೪ ಜನ ಗಂಡು ಮಕ್ಕಳು ಇರುತ್ತಾರೆ. ಅಂಕೇಗೌಡರ ೪ ಜನ ಗಂಡು ಮಕ್ಕಳು ೧೯೫೬-೫೭ ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದ ಬಗ್ಗೆ ಪತ್ರ ಬರೆಯಲಾಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ವಿಭಾಗವನ್ನು ಪತ್ರದ ಮೂಲಕ ಮಾಡಿಕೊಂಡಿರುತ್ತಾರೆ ಎಂಬುದನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗದಲ್ಲಿ ಯಾವ್ಯಾವ ಸರ್ವೆ ನಂಬರ್‌ನ ಆಸ್ತಿಗಳು ಯಾರ್‍ಯಾರ ಹಿಸ್ಸೆಗೆ ಕೊಡಲಾಗಿದೆ ಎಂಬುದನ್ನು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿ ಸರ್ವೆ ನಂಬರ್ ೨೦೭ ರ ಆಸ್ತಿಯಲ್ಲಿ ೪ ಜನ ಗಂಡು ಮಕ್ಕಳಿಗೆ ಭಾಗ ಕೊಡಲಾಗಿದೆ. ಸರ್ವೆ ನಂಬರ್ ೨೦೭ ರಲ್ಲಿ ೪ ಜನರು ಸಮನಾಗಿ ಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದಂತೆ ಸರ್ವೆ ನಂಬರ್ ೨೦೭ರ ಖಾತೆಯನ್ನು ೪ ಜನರು ತಮ್ಮ ತಮ್ಮ ಹೆಸರುಗಳಿಗೆ ಮಾಡಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

೧೯೫೬-೫೭ ರಲ್ಲಿ ೪ ಜನರು ವಿಭಾಗ ಮಾಡಿಕೊಂಡ ನಂತರ ಅವರೆಲ್ಲರೂ ಪ್ರತ್ಯೇಕವಾಗಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ ೨೦೭ ರ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸರ್ವೆ ನಂಬರ್ ೨೦೭ ರ ಖಾತೆ ದಾವಾ ಹಾಕುವ ಪೂರ್ವದಲ್ಲಿ ಚೆನ್ನೇಗೌಡರ ಹೆಸರಿನಲ್ಲಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ಚೆನ್ನೇಗೌಡರು ತೀರಿಕೊಂಡ ನಂತರ ಸರ್ವೆ ನಂಬರ್ ೨೦೭ ರ ಖಾತೆ ಅವರ ಹೆಂಡತಿ ಜಯಮ್ಮನವರಿಗೆ ದಾಖಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಒಟ್ಟು ಕುಟುಂಬದ ವ್ಯಕ್ತಿಗಳ ಹೆಸರಿನಲ್ಲಿ ಇರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ೪ ಜನ ಅಣ್ಣ ತಮ್ಮಂದಿರ ಪೈಕಿ ಈಗ ಎಲ್ಲರೂ ತೀರಿಕೊಂಡಿರುತ್ತಾರೆ. ಅವರ ಜೀವಿತ ಕಾಲದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯಲ್ಲಿರುವ ಸಹಿಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ಎಸ್.ಸಿದ್ದೇಗೌಡ

ಎಂದು ಒಪ್ಪಿರುತ್ತಾರೆ. ಸದರಿ ದಾಖಲೆ ಪಂಚಾಯಿತಿ ಪಾಲು ಪಾರಿಕತ್ ಜೆರಾಕ್ಸ್ ಪ್ರತಿಯಾಗಿರುವುದರಿಂದ ಅದನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. 4 ಜನ ಗಂಡು ಮಕ್ಕಳ ನಡುವೆ ಆದಂತಹ ಪಂಚಾಯಿತಿ ಪಾಲು ಪಾರಿಕತ್ ನನ್ನ ತಂದೆಯ ಉಸ್ತುವಾರಿಯಲ್ಲಿ ಆಗಿತ್ತು ಎಂದರೆ ಸರಿ. ಸದರಿ ಪಂಚಾಯಿತಿ ಪಾಲು ಪಾರಿಕತ್‌ನಂತೆ ದಾವಾ ಸರ್ವೆ ನಂಬರ್ ಸಹ 4 ಜನ ಗಂಡು ಮಕ್ಕಳ ನಡುವೆ ವಿಭಾಗವಾಗಿತ್ತು ಎಂದರೆ ಸರಿ. ಸರ್ವೆ ನಂಬರ್ 207 ರಲ್ಲಿ ಪ್ರತಿವಾದಿಗಳ ತಂದೆ ಎಂ.ಚೆನ್ನೇಗೌಡರಿಗೆ ಬಂದಂತಹ ಹಿಸ್ಸೆಯನ್ನು ಉಳಿದ 3 ಜನ ಅಣ್ಣ ತಮ್ಮಂದಿರು ಗಬಳಿಸಬೇಕೆಂಬ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಂ. ಚೆನ್ನೇಗೌಡರಿಗೆ ಸರ್ವೆ ನಂಬರ್ 207 ರಲ್ಲಿ ಕೊಡಲಾಗಿದ್ದ ಹಿಸ್ಸೆಯ ಆಸ್ತಿಯ ಮೇಲೆ ಉಳಿದ 3 ಜನ ತಮ್ಮಂದಿರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 207 ಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳು ನನಗೆ ತಿಳಿದಿದ್ದರೂ ಸಹ ಸದರಿ 3 ಜನ ಅಣ್ಣ ತಮ್ಮಂದಿರ ಮಕ್ಕಳ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)*

ಓ ಹೇ ಕೇ ಸ ಓ

ಅಪರ ಸಿವಿಲ್ ನ್ಯಾಯಾಧೀಶರು, ಚನ್ನಪಟ್ಟಣ.

<u>ದಿಃ 28.10.2015 OS.No. 76/2011 PW-3</u>

28.10.2015 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

*<u>ಪಾಟೀ ಸವಾಲು : ಶ್ರೀ. ಕೆ.ಟಿ.ಟಿ ವಕೀಲರಿಂದಃ</u>*

ಎಂ. ಏಳವೇಗೌಡ ಹಾಗೂ ಎಂ.ಚನ್ನೇಗೌಡ ಮತ್ತು ಅವರ ತಮ್ಮಂದಿರು ನನ್ನ ಸೋದರ ಮಾವಂದಿರಾಗಬೇಕು. ಅವರ ನಡುವೆ ೨೦-೨೫ ವರ್ಷದ ಹಿಂದೆ ವಿಭಾಗವಾಗಿತ್ತು. ಅವರು ಯಾವ ರೀತಿ ವಿಭಾಗ ಮಾಡಿಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ನಾನು ಭಾಗವಹಿಸಿರಲಿಲ್ಲ. ವಿಭಾಗದ ನಂತರ ಸದರಿ ೪ ಜನ ಅಣ್ಣ ತಮ್ಮಂದಿರು ತಮ್ಮ ತಮ್ಮ ಸ್ವತ್ತುಗಳನ್ನು ಅನುಭವಿಸಿಕೊಂಡು ಪ್ರತ್ಯೇಕವಾಗಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಿಭಾಗದ ಪ್ರಕಾರ ಉಭಯ ಪಕ್ಷಗಾರರ ಹೆಸರುಗಳಿಗೆ ಪ್ರತ್ಯೇಕವಾಗಿ ಖಾತೆಗಳು ಬದಲಾವಣೆಯಾಗಿವೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈಗ ೪ ಜನ ಅಣ್ಣ

ತಮ್ಮಂದಿರು ಜೀವಂತ ಇರುವುದಿಲ್ಲ ಎಂದರೆ ಸರಿ. ಸದರಿ ೪ ಜನ ಜೀವಂತ ಇದ್ದ ಸಮಯಕ್ಕೆ ಸರ್ವೆ ನಂಬರ್ ೨೦೭ ಕ್ಕೆ ಸಂಬಂಧಿಸಿದಂತೆ ತಕರಾರು ಇತ್ತು. ಆದರೆ ಯಾವುದೇ ಪ್ರಕರಣಗಳು ದಾಖಲಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಉಳಿದ ೩ ಜನ ಅಣ್ಣ ತಮ್ಮಂದಿರು ಸರ್ವೆ ನಂಬರ್ ೨೦೭ ರಲ್ಲಿ ತಮಗೂ ಸಹ ಹಕ್ಕು ಇದೆ ಎಂದು ಹೇಳಿ ಎಂ. ಚೆನ್ನೇಗೌಡರಿಗೆ ಯಾವುದೇ ನೋಟೀಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ ೨೦೭ ರಲ್ಲಿ ಎಂ. ಚೆನ್ನೇಗೌಡರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಖಾತೆ ಇದೆ ಎಂಬುದು ನನಗೆ ಗೊತ್ತಿಲ್ಲ. ಪಂಚಾಯಿತಿ ಪಾಲು ಪಾರಿಕತ್‌ನಲ್ಲಿ ಎಂ. ಚನ್ನೇಗೌಡರಿಗೆ ಸರ್ವೆ ನಂಬರ್ ೨೦೭ ರಲ್ಲಿ ೩೦ ಗುಂಟೆ ಜಮೀನನ್ನು ಕೊಟ್ಟಿದ್ದು, ಸದರಿ ೩೦ ಗುಂಟೆ ಜಮೀನಿನ ಖಾತೆ ಎಂ.ಚೆನ್ನೇಗೌಡರ ಹೆಸರಿನಲ್ಲಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ ೨೦೭ ರ ಖಾತೆ ಸದರಿ ೪ ಜನರ ಜಂಟಿ ಖಾತೆಯಲ್ಲಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಚೆನ್ನೇಗೌಡರಿಗೆ ಕೊಡಲಾಗಿದ್ದ ೩೦ ಗುಂಟೆ ಜಮೀನು ಬೆಂಗಳೂರು ಮೈಸೂರು ಹೆದ್ದಾರಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ಸದರಿ ೩೦ ಗುಂಟೆ ಜಮೀನು ಈಗ ಅತಿ ಹೆಚ್ಚಿನ ಬೆಲೆಬಾಳುವ ಜಮೀನು ಆಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ್ ೨೦೭ ರಲ್ಲಿ ೩೦ ಗುಂಟೆ ಜಮೀನು ಚೆನ್ನೇಗೌಡರ ಹಿಸ್ಸೆಗೆ ಕೊಟ್ಟಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಉಳಿಕೆ ೩ ಜನ ಅಣ್ಣ ತಮ್ಮಂದಿರ ಮಕ್ಕಳ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)*

ಓ ಹೇ ಕೇ ಸ ಓ

ಅಪರ ಸಿವಿಲ್ ನ್ಯಾಯಾಧೀಶರು, ಚನ್ನಪಟ್ಟಣ.